Reg. No. | | | | | | | | | |

**KNH 501**

**ಮೂರನೆಯ ಚತುರ್ಮಾಸ ಎಂ.ಎ. ಪದವಿ ಪರೀಕ್ಷೆ, ಡಿಸೆಂಬರ್ 2018**

**(ಆಯ್ಕೆ ಆಧಾರಿತ ಕ್ರೆಡಿಟ್ ಪದ್ಧತಿ)**

**ಕನ್ನಡ**

**ಪ್ರಾಚೀನ ಕನ್ನಡ ಸಾಹಿತ್ಯ**

ಸಮಯ : ೩ ಗಂಟೆಗಳು ಗರಿಷ್ಠಾಂಕಗಳು : ೭೦

೧. ಹತ್ತನೇ ಶತಮಾನದ ಸಾಮಾಜಿಕ, ಧಾರ್ಮಿಕ ಸ್ಥಿತಿಗತಿಗಳು ಕನ್ನಡ ಸಾಹಿತ್ಯದ ಮೇಲೆ ಬೀರಿದ ಪ್ರಭಾವವನ್ನು ಪರಾಮರ್ಶಿಸಿರಿ. ೧೫

**ಅಥವಾ**

ಚಂಪು ಪೂರ್ವ ಯುಗದ ಗದ್ಯ ಸಾಹಿತ್ಯ ಬೆಳೆದು ಬಂದ ಬಗೆಯನ್ನು ವಿವೇಚಿಸಿರಿ.

೨. ಕವಿರಾಜ ಮಾರ್ಗಕಾರನು ನಾಡುನುಡಿಯ ಕುರಿತು ನಿರೂಪಿಸಿರುವ ಬಗೆಯನ್ನು ವಿವೇಚಿಸಿರಿ. ೧೫

**ಅಥವಾ**

ಕವಿರಾಜ ಮಾರ್ಗಕಾರನು ಚರ್ಚಿಸಿರುವ ಶಬ್ದಾಲಂಕಾರಗಳ ಕುರಿತು ವಿವರಿಸಿರಿ.

೩. ರನ್ನ ಕವಿಯು ನಿರೂಪಿಸಿರುವ 'ದುರ್ಯೋಧನ ವಿಲಾಪ' ಭಾಗದ ಮಹತ್ವವನ್ನು ವಿವೇಚಿಸಿರಿ. ೧೫

**ಅಥವಾ**

'ಗದಾಯುದ್ಧ'ದಲ್ಲಿ 'ಭೀಮ ಸೇನಾಡಂಬರಂ' ಭಾಗದ ಸ್ವಾರಸ್ಯವನ್ನು ವಿವರಿಸಿ.

೪. ಕಾವ್ಯಭಾಗಗಳ ಭಾವಾರ್ಥವನ್ನು ಬರೆಯಿರಿ. ೧೦

ಕಂದಂಗಳ್ ಫಲವಾಗಿರೆ
ಸುಂದರ ವೃತ್ತಂಗಳಕ್ಕರಂ ಚವುಪದಿ ಮ
ತ್ತಂ ದಲ್ ಗೀತಿಕೆ ತಿವದಿಗ
ಳಂದಂಬೆತ್ತೆಸೆಯೆ ಪೇೞ್ದೊಡದು ಚತ್ತಾಣಂ.

**ಅಥವಾ**

ಶರಮೊಂದಂ ತೆಗೆದು ನಿಜೋ
ದರದಿಂ ಲೆಕ್ಕಣಿಕೆ ಮಾಡಿ ಗಜಮದಮಸಿಯಂ
ತರಿಸಿ ಪತಾಕಾಪಟದೊಳ್
ಬರೆದಟ್ಟಿದನಂಧನೃಪತಿಗಾ ಸಿಂಧು ಸುತಂ.

೫. **ಮೂರಕ್ಕೆ** ಟಿಪ್ಪಣಿ ಬರೆಯಿರಿ. **(೩×೫=೧೫)**

೧) ಅರ್ಥಾಲಂಕಾರಗಳು

೨) ಕಾವ್ಯದೋಷಗಳು

೩) ಬೆದಂಡೆ

೪) ಭೀಷ್ಮ ವಚನ

೫) ಭೀಮಸೇನಾ ಪ್ರತಿಜ್ಞೆ

೬) ರನ್ನ ಕವಿಯ ಕಾಲ.

---